# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 86 | Pages. 2 | Date: 04-03-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 86 - ಪುಟಗಳು : 2 | 04-03-2026 | ಬುಧವಾರ | Ph: 8762954248 | ದರ : ₹1


# ಜಿಲ್ಲಾಡಳಿತ ಸಂಧಾನ: ರಥೋತ್ಸವ ಶಾಂತಿಯುತ

## ಹೂವಿನ ಅಲಂಕಾರಕ್ಕೆ ಸೀಮಿತ | ಸಾವಿರಾರು ಭಕ್ತರು ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಪಟ್ಟಣದ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ರಥೋತ್ಸವ ಮಂಗಳವಾರ ಅದ್ದೂರಿಯಾಗಿ ನೆರವೇರಿದ್ದು, ರಥಕ್ಕೆ ವಸ್ತ್ರ ಹಾಕುವ ವಿಚಾರಕ್ಕೆ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ಉಂಟಾಗಿದ್ದ ಗೊಂದಲವನ್ನು ಶಮನಗೊಳಿಸುವಲ್ಲಿ ಜಿಲ್ಲಾಡಳಿತ ಯಶಸ್ವಿಯಾಗಿದೆ.

ಪಾಲ್ಗುಣಿಮಾಸ ಶುಕ್ಲಪಕ್ಷ ಪೂರ್ಣಿಮೆಯ ಮಂಗಳವಾರ ಪುಬ್ಬ ನಕ್ಷತ್ರದಲ್ಲಿ ಬೆಳಿಗ್ಗೆ 8.12 ರಿಂದ 8.53ರ ಒಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿಯ ಉತ್ಸವ ಮೂರ್ತಿ ವಿರಾಜ ಮಾನರಾಗಿರುವ ಫಲಪುಷ್ಪಗಳಿಂದ

ಸರ್ವಾಲಂಕೃತವಾದ ಭವ್ಯ ರಥವನ್ನು ಭಕ್ತರು ರಾಜ ಬೀದಿಯಲ್ಲಿ ವಿವಿಧ ವೇದ ಮಂತ್ರಗಳ ಘೋಷಗಳ ಪಾರಾಯಣದೊಂದಿಗೆ ಎಳೆದು ಬೆಳಿಗ್ಗೆ 11.15 ಗಂಟೆಗೆ ಸ್ವಸ್ಥಾನಕ್ಕೆ ಎಳೆದು ತಂದು ನಿಲ್ಲಿಸಿದರು.

ವಿವಾದಕ್ಕೆ ಕಾರಣವಾಗಿದ್ದ ರಥಕ್ಕೆ ಬಟ್ಟೆ ವಿಚಾರಕ್ಕೆ ತೆರೆ ಎಳೆದ ಜಿಲ್ಲಾಡಳಿತ, ರಥಕ್ಕೆ ಹಳೆ ಅಥವಾ ಹೊಸ ಬಟ್ಟೆ ತೊಡಿಸುವ ಸಂಪ್ರದಾಯಕ್ಕೆ ತಡೆಯೊಡ್ಡಿ, ರಥಕ್ಕೆ ಕೇವಲ ಹೂವಿನಿಂದ



ಅಲಂಕಾರ ಮಾಡುವ ಮೂಲಕ ಉತ್ಸವ ನಡೆಯಲು ಅನುವು ಮಾಡಿಕೊಡಲಾಯಿತು.

ಶಾಸಕ ಹೆಚ್.ಡಿ.ರೇವಣ್ಣ, ಸಂಸದ ಸಂಸದ ಶ್ರೇಯಸ್ ಪಟೇಲ್ ಸೇರಿ ಹಲವು ಗಣ್ಯರು ಹಾಗೂ ಸಾವಿರಾರು ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು. ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದರ್ಶನ ಪಡೆದು ಪುನೀತರಾದರು.

ಉಪ ವಿಭಾಗಾಧಿಕಾರಿ ಮತ್ತು ಪುರಸಭೆ ಆಡಳಿತಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಸೀಲ್ದಾರ್ ವೈ.ಎಂ.ರೇಣುಕುಮಾರ್, ಪುರಸಭೆ ಮುಖ್ಯಾಧಿಕಾರಿ ಯು. ಎನ್.ಶಿವಶಂಕರ್ ಸೇರಿ ಸ್ಥಳೀಯ ಜನಪ್ರತಿನಿಧಿಗಳು, ಸಾರ್ವಜನಿಕರು, ಪೋಲಿಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. ಭಕ್ತಾಧಿಗಳಿಗೆ ತಾಲ್ಲೂಕು ಆಡಳಿತದಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಸೋಮವಾರ ಬೆಳಗ್ಗೆಯಿಂದಲೂ ರಥಕ್ಕೆ ಬಟ್ಟೆ ಅಲಂಕಾರ ಮಾಡುವ ವಿಚಾರವಾಗಿಯೇ ಎಚ್.ಡಿ.ರೇವಣ್ಣ ಹಾಗೂ ಶ್ರೇಯಸ್ ಪಟೇಲ್, ಮತ್ತವರ ಕಡೆಯವರ ನಡುವೆ ನಿರಂತರ ವಾಗ್ವಾದ ನಡೆದು ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ರೇವಣ್ಣ ಧರಣಿ ಸಹ ನಡೆಸಿದ್ದರು. ಡಿಸಿ ಲತಾ ಕುಮಾರಿ ಅವರು ದೂರವಾಣಿ ಕರೆ ಮಾಡಿ ಸಮಾಧಾನ ಮಾಡಿದ್ದರು.

### ಮುನಿಸು ಮರೆತು ಕೈ ಜೋಡಿಸಿದ ರೇವಣ್ಣ

ತಹಸೀಲ್ದಾರ್ ಸಭೆಯಲ್ಲಿ ರಥದ ಬಟ್ಟೆ ಬದಲಿಸೋ ಯಾವ ನಿರ್ಣಯ ಆಗಿರಲಿಲ್ಲ. ಆದರೀಗ ಡಿಸಿ ಸೂಚನೆ ನೀಡಿದ್ದಾರೆಂಬ ಕಾರಣಕ್ಕೆ ರಥದ ಬಟ್ಟೆ ಬದಲಾವಣೆಗೆ ಕೈ ಹಾಕಿದರೆ ಮುಂದೆ ಆಗುವ ಅನಾಹುತಕ್ಕೆ ನಾನು ಕಾರಣ ಅಲ್ಲ, ರಥದ ಬಟ್ಟೆ ಬದಲಾಗಬಾರದು ಎಂದು ರೇವಣ್ಣ ಎಚ್ಚರಿಕೆ ನೀಡಿದ್ದರು. ಇದು ಜಟಾಪಟಿಗೆ ಕಾರಣವಾಗಿತ್ತು. ಕೊನೆಗೆ ಮಧ್ಯ ಪ್ರವೇಶಿಸಿದ ಜಿಲ್ಲಾಡಳಿತ ಯಾವುದೇ ಬಟ್ಟೆ ಬೇಡ, ಕೇವಲ ಹೂವಿನ ಅಲಂಕಾರದಲ್ಲೇ ರಥೋತ್ಸವ ನಡೆಯಲಿ ಎಂದು ನಿರ್ಧಾರ ಮಾಡಿತು.

ರಥದ ಮೇಲಿದ್ದ ಹಳೆ ಬಟ್ಟೆ ತೆಗೆದಿದ್ದಕ್ಕೆ ಮೊದಲು ಗರಂ ಆಗಿದ್ದ ರೇವಣ್ಣ ಬೆಳಗ್ಗೆ ರಥೋತ್ಸವದಲ್ಲಿ ಭಾಗಿಯಾಗಿ ರಥ ಎಳೆದು ವಿಶೇಷ ಪೂಜೆ ಸಲ್ಲಿಸಿದರು.

### ಮುಂದಿನ ವರ್ಷದಿಂದ ಜಿಲ್ಲಾಡಳಿತವೇ ಜಾತ್ರೆ ಮಾಡಲಿ

ಸುದ್ದಿಗಾರರೊಂದಿಗೆ ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ರಾಜಕೀಯ ಚುನಾವಣೆ ಸಮಯದಲ್ಲಿ ಮಾತ್ರ ಇರಬೇಕು. ಅವರು ನಾಲ್ಕೈದು ಬಾರಿ ಶಾಸಕರಾದವರು, ಅವರೇ ನಮಗೂ ಮಾರ್ಗದರ್ಶನ ಮಾಡಬಹುದಿತ್ತು. ರಥದ ಬಟ್ಟೆಗೆ ನಮ್ಮ ತಾಯಿ ಆಸೆಯಂತೆ ಹಣ ನೀಡಿದ್ದೆ, ಈ ಕಾರಣಕ್ಕೆ ವಿವಾದ ಶುರುಮಾಡಿದರು. ಶಾಂತಿಯುತವಾಗಿ ಜಾತ್ರೆ ಆಗಬೇಕೇ ಹೊರತು, ಈ ರೀತಿ ಯಾರಿಗೂ ಬೇಸರ ಮಾಡಬಾರದು, ಯಾರಿಂದಲೇ ತಪ್ಪಿದ್ದರೂ ನಾನೇ ಎಲ್ಲ ಜನರಲ್ಲಿ ಕ್ಷಮೆ ಕೇಳುವೆ. ಮುಂದೆ ಈ ರೀತಿ ಆಗಬಾರದು, 2028ರ ವರೆಗೂ ಅವರೇ ಶಾಸಕರು, ಮುಂದಿನ ವರ್ಷವಾದರೂ ಶಿಸ್ತು-ಸಂಪ್ರದಾಯಬದ್ಧವಾಗಿ ಜಾತ್ರೆ ಮಾಡಲಿ, ನಿನ್ನೆ-ಮೊನ್ನೆ ಬೆಳವಣಿಗೆ ಬೇಸರ ತರಿಸಿವೆ. ಇದು ರಿಪಬ್ಲಿಕ್ ಆಫ್ ಹೊಳೆನರಸೀಪುರ ಅಲ್ಲ ಅದೆಲ್ಲಾ ಮುಗಿದಿದೆ. ಮತ್ತೆ ಗೊಂದಲ ಮುಂದುವರಿದರೆ ಮುಂದಿನ ಬಾರಿ ಜಿಲ್ಲಾಡಳಿತವೇ ಜಾತ್ರೆ ನಡೆಸಲಿ ಎಂದರು.

### ಅಪಾರ ಭಕ್ತರ ಸಮಾಗಮ

ಕೇತುಗ್ರಸ್ಥ ಚಂದ್ರಗ್ರಹಣ ಹಿನ್ನೆಲೆ ಬೆಳಗ್ಗೆಯಿಂದಲೇ ದೇವಾಲಯಕ್ಕೆ ಭಕ್ತಸಾಗರ ಹರಿದುಬಂದಿತ್ತು. ರಥೋತ್ಸವ ಹಿನ್ನೆಲೆ ಯಾವುದೇ ಅಹಿತಕರ ಘಟನೆ ನಡೆಯದಂತೆ ದೇವಾಲಯದ ಸುತ್ತಮುತ್ತ ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

## ಪ್ರಾಣಿ ಪಕ್ಷಿಗಳ ನೀರಿನ ದಾಹ ನೀಗಿಸಲು ಜಿಲ್ಲಾಧಿಕಾರಿ ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಬೇಸಿಗೆ ಆರಂಭವಾಗಿದ್ದು ಪ್ರಾಣಿ-ಪಕ್ಷಿಗಳು ತೀವ್ರ ತೊಂದರೆಯನ್ನು ಅನುಭವಿಸುತ್ತವೆ. ಆದ್ದರಿಂದ ಬೇಸಿಗೆಯಲ್ಲಿ ಪ್ರಾಣಿ ಪಕ್ಷಿಗಳಿಗೆ ನೀರುಣಿಸುವ ಮೂಲಕ ಎಲ್ಲರೂ ಔದಾರ್ಯ ತೋರಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸಲಹೆ ನೀಡಿದ್ದಾರೆ.

ಅತಿಯಾದ ತಾಪಮಾನದಿಂದಾಗಿ ನಿರ್ಜಲೀಕರಣಗೊಂಡು ನೀರಿನ ಬಳಲುವಿಕೆಯನ್ನು ಎದುರಿಸುತ್ತವೆ. ಇದರಿಂದಾಗಿ ಜೀವಸಂಕುಲಗಳು ನೀರಿನ ಅಭಾವದಿಂದಾಗಿ ಸಾವನ್ನಪ್ಪುವ ಸಂಭವವಿರುತ್ತದೆ. ಇದು ಪರಿಸರ ಅಸಮತೋಲನ ಮತ್ತು ಸಾರ್ವಜನಿಕರ ಆರೋಗ್ಯದ ಸಮಸ್ಯೆಯ ದುಷ್ಪರಿಣಾಮ ಬೀರುತ್ತದೆ. ಎಲ್ಲಾ ಸರ್ಕಾರಿ, ಸ್ವಾಯತ್ತ,ಖಾಸಗಿ ಕಚೇರಿಗಳು ಮತ್ತು ಸಾರ್ವಜನಿಕರು ಮಾನವೀಯತೆಯಿಂದ ಸ್ವಯಂ ಪ್ರೇರಿತವಾಗಿ ನಡೆದುಕೊಳ್ಳುವುದು ಅತ್ಯಂತ ಸೂಕ್ತ. ಸಾರ್ವಜನಿಕ ಪ್ರದೇಶದಲ್ಲಿ ಪ್ರಾಣಿಗಳಿಗೆ- ಪಕ್ಷಿಗಳಿಗೆ ಕುಡಿಯುವ ನೀರಿನ ತೊಟ್ಟಿಗಳನ್ನು ಅಳವಡಿಸುವುದು, ಪಕ್ಷಿಗಳಿಗಾಗಿ ಮನೆಗಳ, ಕಚೇರಿಗಳ ತಾರಸಿ ಬಾಲ್ಕನಿ ಮರಗಳ ರಂಬೆ-ಕೊಂಬೆಗಳಲ್ಲಿ ನೀರನ್ನು ಇಡುವುದು, ಉದ್ಯಾನವನಗಳಲ್ಲಿ ನಿರ್ವಹಣೆ ಸಂಸ್ಥೆಯವರು ನೀರಿನ ತೊಟ್ಟಿಗಳನ್ನು ಅಳವಡಿಸಿ ಪ್ರಾಣಿ- ಪಕ್ಷಿಗಳಿಗೆ ನೀರನ್ನು ಒದಗಿಸುವುದು, ನೀರನ್ನು ಪ್ರತಿನಿತ್ಯ ಖಾಲಿಯಾದ ನಂತರ ಸ್ವಚ್ಛಗೊಳಿಸಿ ಪುನಃ ತುಂಬಿಸುವುದು, ತಾಪಮಾನದ ತೀವ್ರತೆಯನ್ನು ಕಡಿಮೆ ಮಾಡಲು ಮಣ್ಣಿನ ಮಡಕ ಪಾತ್ರೆಗಳನ್ನು ಬಳಸುವುದು, ತಾಪಮಾನ ಹೆಚ್ಚಾಂದಂತೆಲ್ಲ ಮರ-ಗಿಡಗಳು ಬೆಳವಣಿಗೆ ಕುಂಠಿತವಾಗಿ ನೆರಳಿನ ಅಭಾವ ಸೃಷ್ಟಿಯಾಗುತ್ತದೆ. ಆದ್ದರಿಂದ ಮರ-ಗಿಡಗಳನ್ನು ಕಡಿಯದಂತೆ ನಿಗಾವಹಿಸುವುದು, ಸಂತೆ- ಮಾರುಕಟ್ಟೆ ಪ್ರದೇಶಗಳಲ್ಲಿ ಜಾನುವಾರುಗಳಿಗೆ ಸಮರ್ಪಕ ನೀರು ಮತ್ತು ನೆರಳಿನ ವ್ಯವಸ್ಥೆ ಮಾಡುವುದು, ಪ್ರಾಣಿ ದಯಾ ಸಂಘದವರು ಸ್ವಯಂ ಪ್ರೇರಿತವಾಗಿ ಆಹಾರ-ನೀರು ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದಾರೆ.

ಸಾರ್ವಜನಿಕರ ಜವಾಬ್ದಾರಿಗಳು: ನಾಗರೀಕರು/ವಿದ್ಯಾರ್ಥಿಗಳು ಸ್ವಯಂ ಪ್ರೇರಿತವಾಗಿ ಕ್ರಮಗೊಳ್ಳುವುದು, ಸಾರ್ವಜನಿಕ ಪ್ರಜ್ಞೆ- ಅರಿವು ಮೂಡಿಸಲು ಕ್ರಮ ವಹಿಸುವುದು, ಪ್ರಾಣಿ-ಪಕ್ಷಿಗಳು ತೊಂದರೆಗೀಡಾದಲ್ಲಿ ಕೂಡಲೇ ಪಶು ವೈದ್ಯಕೀಯ ಸೇವೆಗೆ ಸಹಕರಿಸುವುದು, ಸಂತೆ- ಮಾರುಕಟ್ಟೆ ಪ್ರದೇಶಗಳಲ್ಲಿ ಜಾನುವಾರುಗಳಿಗೆ ಸಮರ್ಪಕ ನೀರು ಮತ್ತು ನೆರಳಿನ ವ್ಯವಸ್ಥೆ ಮಾಡುವುದು ನೀರು ಅತ್ಯಮೂಲ್ಯವಾಗಿದ್ದು ಪೋಲಾಗದಂತೆ ತಡೆಯಬೇಕು ಎಂದು ಅವರು ಹೇಳಿದ್ದಾರೆ.

## ಹಾಸನದಲ್ಲಿ 900 ಕೋಟಿ ರೂ. ವೆಚ್ಚದಲ್ಲಿ ಮೆಗಾ ಡೇರಿ ನಿರ್ಮಾಣ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಜಿಲ್ಲೆಯಲ್ಲಿ ಡೇರಿ ಉದ್ಯಮಕ್ಕೆ ಉತ್ತೇಜನ ನೀಡುವ ಸಲುವಾಗಿ ಹಾಸನದ ಕೌಶಿಕ ಬಳಿ 900 ಕೋಟಿ ರೂ. ವೆಚ್ಚದಲ್ಲಿ ಮೆಗಾ ಡೇರಿ ನಿರ್ಮಾಣವಾಗುತ್ತಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲೂಕಿನ ಕಲ್ಕೆರೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ವತಿಯಿಂದ ನಿರ್ಮಿಸಿರುವ ನೂತನ ಡೇರಿ ಕಟ್ಟಡ ಉದ್ಘಾಟಿಸಿ ಮಾತನಾಡಿ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಹಾಸನ ಹಾಲು ಒಕ್ಕೂಟದ ಅಧ್ಯಕ್ಷ ಎಚ್.ಡಿ. ರೇವಣ್ಣ ಅವರ ಪರಿಶ್ರಮದಿಂದ ಜಿಲ್ಲಾ ಕೇಂದ್ರದ ಕೌಶಿಕ ಬಳಿ ಕಟ್ಟಡ ನಿರ್ಮಾಣವಾಗುತ್ತಿದೆ ಎಂದರು.

ಕಲ್ಕೆರೆ ಹಾಲು ಉತ್ಪಾದಕರ ಸಹಕಾರ ಸಂಘದಿಂದ 12 ಲಕ್ಷ ರೂ. ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣ ಮಾಡಲಾಗಿದೆ. ಪ್ರತಿನಿತ್ಯ 850 ಲೀಟರ್ ಹಾಲನ್ನು ರೈತರಿಂದ ಖರೀದಿಸಲಾಗುತ್ತಿದೆ. ಪ್ರತಿ ಮಾಸಿಕ 10 ಲಕ್ಷ ರೂ. ವಹಿವಾಟು ನಡೆಯುತ್ತಿದೆ. ಸದ್ಯ ಹಾಸನ ಹಾಲು ಒಕ್ಕೂಟದಿಂದ ಪ್ರತಿ ಲೀಟರ್‌ಗೆ 35 ರೂ. ನೀಡಲಾಗುತ್ತಿದ್ದು ಸರ್ಕಾರದ ಸಹಾಯಧನ ಸೇರಿ 39 ರೂ. ಆಗಲಿದೆ. ಮುಂಬರುವ ದಿನಗಳಲ್ಲಿ ಹೆಚ್ಚಿನ ಬೆಲೆ ಕುರಿತು ಅಧ್ಯಕ್ಷರು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು. ಕಳೆದ 3 ವರ್ಷಗಳಲ್ಲಿ ತಾಲೂಕಿನ ರೈತರಿಗೆ ಡೇರಿಗಳ ಮೂಲಕ ಸುಮಾರು 5 ಕೋಟಿ ರೂ. ವೆಚ್ಚದಲ್ಲಿ ಮ್ಯಾಟ್ ಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗಿದೆ. ಹೊಸ ಡೇರಿ ಕಟ್ಟಡ ನಿರ್ಮಾಣಕ್ಕೂ ಕೆಎಂಎಫ್ ಹಾಗೂ ಹಾಸನ ಹಾಲು ಒಕ್ಕೂಟ ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹೆಚ್ಚಿನ ಅನುದಾನ ಕೊಡಲಾಗುತ್ತದೆ ಎಂದರು. ಎಪಿಎಂಸಿ ಮಾಜಿ ಅಧ್ಯಕ್ಷ ದೊರೆಸ್ವಾಮಿ, ಕಲ್ಕೆರೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ಪ್ರಭಾಕರ್, ಸಂಘದ ಅಧ್ಯಕ್ಷೆ ಮಂಜುಳಾ ತಿಮ್ಮೇಗೌಡ, ಕೃಷಿ ಪತ್ತಿನ ನಿರ್ದೇಶಕರಾದ ಕಲ್ಕೆರೆ ಅಶೋಕ್, ದೇವರಾಜ್, ಮುಖಂಡರಾದ ನಾಗೇಗೌಡ, ಬೈರೇಗೌಡ, ಎಚ್.ಬಿ. ರಂಗಸ್ವಾಮಿ ಇತರರಿದ್ದರು.

## ಯೋಗಿ ನಾರಾಯಣರು ವಿವೇಕರು: ಹೆಚ್.ಎಲ್. ಮಲ್ಲೇಶ್‌ಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಎಲ್ಲ ವಿದ್ಯಾವಂತರು ವಿವೇಕಿಗಳಲ್ಲ, ಎಲ್ಲ ಜ್ಞಾನಿಗಳು ವಿವೇಕಿಗಳಲ್ಲ, ಬುದ್ಧಿವಂತರೆಲ್ಲ ಜ್ಞಾನಿಗಳಲ್ಲ, ಜ್ಞಾನಿಗಳೆಲ್ಲ ವಿವೇಕರಲ್ಲ, ಯಾರು ವಿವೇಕಿಯೋ ಅವನಿಗೆ ಮಾತ್ರ ಸತ್ಯಗಳು ಗೋಚರವಾಗುತ್ತದೆ. ಅಂತಹ ಪಾತ್ರಕ್ಕೆ ಹೆಸರಾದವರು ಕೈವಾರ ತಾತಯ್ಯ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಲ್.ಮಲ್ಲೇಶ್ ಗೌಡ ತಿಳಿಸಿದರು.

ಹಾಸನಾಂಬ ಕಲಾಕ್ಷೇತ್ರದಲ್ಲಿ ಮಂಗಳವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಡೆದ ಯೋಗಿ ನಾರಾಯಣ ಯತಿಂದ್ರರ ( ಕೈವಾರ ತಾತಯ್ಯ) ಜಯಂತಿ ಉದ್ಘಾಟಿಸಿ ಮಾತನಾಡಿ, ಜಗತ್ತಿನ ಬಹುತೇಕ ಸಾಧಕರು ಮೂಲತಃ ನೋವು ಉಂಡವರು. ಅಂತಹ ತತ್ವಜ್ಞಾನಿಗಳಿಗೆ ಮಾತ್ರ ಜಗತ್ತಿನ ಸತ್ಯಗಳನ್ನು ತಿಳಿಯಲು ಸಾಧ್ಯ. ಸುಖದಲ್ಲಿ ಇದ್ದವರಿಗೆ ಜಗತ್ತಿನ



ಸತ್ಯವನ್ನು ತಿಳಿಯಲು ಸಾಧ್ಯವಿಲ್ಲ ಎಂದರು.

ಅನೇಕ ವಿದ್ವಾಂಸರ, ಸಾಹಿತಿಕಾರರು, ತತ್ವಜ್ಞಾನಿಗಳು, ವಚನಕಾರರು, ಹುಟ್ಟಿದ ಸ್ಥಳಕ್ಕೆ ವಿಶೇಷವಾದ ಮಹಿಮೆ ಪ್ರಾಪ್ತಿವಾಗುತ್ತದೆ. ಹಾಗೆ ಯೋಗಿ ನಾರಾಯಣ ಅವರು ಹುಟ್ಟಿದ ಕೈವಾರಕ್ಕೂ ವಿಶೇಷವಾದ ಹೊಳಪು ಪ್ರಾಪ್ತಿಯಾಗಿದೆ. ತಾವು ಹುಟ್ಟಿದ ಸ್ಥಳಕ್ಕೆ ಬೆಳಕು ತಂದು ಕೊಡುವಂತಹ ಕೆಲಸ ಮಹಾಪುರುಷರ ಸ್ವಭಾವ ಎಂದು ಹೇಳಿದರು.

ದಕ್ಷಿಣ ಭಾರತವು ತ್ರೇತ್ರಾಯುಗ ಮತ್ತು ದ್ವಾಪರ ಯುಗದಲ್ಲಿ ಜಗತ್ತಿನ ಮನುಷ್ಯರು ಬದುಕಿಗೆ ಬೇಕಾದಂತಹ ಕಟು ಸತ್ಯವನ್ನು ಪ್ರತಿಪಾದನೆ ಮಾಡುವಲ್ಲಿ ಅನೇಕ ಚಿಂತಕರು, ಮೇಧಾವಿಗಳು, ದಾರ್ಶನಿಕರು, ಕನ್ನಡ ನಾಡಿನ ನೆಲೆಯಲ್ಲಿ ಶ್ರೇಷ್ಠ ಕಾವ್ಯ, ಕವನ, ತತ್ವಪದ, ವಚನ, ಇತ್ಯಾದಿಗಳನ್ನು ರೂಪಿಸಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಮನೆ ಗೆದ್ದು ಮಾರು ಗೆಲ್ಲು ಎನ್ನುವುದು ಪೂರ್ವಿಕರ ಒಂದು ಆಲೋಚನೆ, ಯಾರು ಮನೆಯಲ್ಲಿ ತನ್ನ ಜವಾಬ್ದಾರಿಯನ್ನು ಸರಳವಾಗಿ ನಿರ್ವಹಿಸುತ್ತಾನೆ, ಅವನು ಸಮಾಜದಲ್ಲಿ ಜವಾಬ್ದಾರಿಯನ್ನು ಸರಳವಾಗಿ ನಿರ್ವಹಿಸುತ್ತಾನೆ ಹೇಳಿದರು.

ಜಿಲ್ಲಾಧಿಕಾರಿ ಕಚೇರಿಯ ಸಹಾಯಕ ರಮೇಶ್ ಮಾತನಾಡಿ, ಸಮಾಜದ ಒಳಿತಿಗಾಗಿ ಕೈವಾರ ತಾತಯ್ಯನವರು ನೀಡಿರುವ ತತ್ವಗಳನ್ನು ಅನುಸರಿಸುತ್ತ ಸಮಾಜವನ್ನುಒಳ್ಳೆಯ ಮಾರ್ಗದ ಕಡೆಗೆ ತರುವ ನಿಟ್ಟಿನಲ್ಲಿ ನಾವು ಸಹ ಕೈಜೋಡಿಸೋಣ. ಕೈವಾರ ತಾತಯ್ಯನವರು ನೀಡಿರುವಂತಹ ಮಾರ್ಗದರ್ಶನದ ಮೂಲಕ ಯುವಕರು ಅವರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಸಾಹಿತಿ ಎನ್.ಎಲ್. ಚನ್ನೇಗೌಡ ಮಾತನಾಡಿ, ಕೈವಾರ ತಾತಯ್ಯನವರು ಸಂಸಾರದ ಹೊರೆಯನ್ನು ತೊರೆದು ಸನ್ಯಾಸಿ ಪಟ್ಟವನ್ನು ಸ್ವೀಕರಿಸಿ ಸಮಾಜಕ್ಕೆ ಅನೇಕ ಆಧ್ಯಾತ್ಮಿಕ ತತ್ವಪದಗಳನ್ನು ನೀಡಿದರು.

ಪ್ರಾಪಂಚಿಕ ಜ್ಞಾನವನ್ನು ಮರೆತು ಆಧ್ಯಾತ್ಮಿಕವಾಗಿ ಜೀವನವನ್ನು ರೂಪಿಸಿಕೊಳ್ಳುವುದರ ಜೊತೆಗೆ ಸಮಾಜಕ್ಕೆ ಮಾದರಿಯಾಗುವಂತಹ ಅನೇಕ ಪಿಡುಗುಗಳನ್ನು ರೂಪಿಸುವಲ್ಲಿ ಕೈವಾರ ತಾತಯ್ಯನವರ ಪಾತ್ರ ತುಂಬಾ ಮುಖ್ಯವಾಗಿದೆ ಎಂದರು.

ಕೈವಾರ ತಾತಯ್ಯನವರು ಸುಮಾರು 20 ರಿಂದ 25 ತತ್ವಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ, ಇಂತಹ ಮಹನೀಯರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಆಧ್ಯಾತ್ಮಿಕವಾಗಿ ಬದುಕು ನಡೆಸಲು ಸುಲಭ. ಇಂತಹ ಸಾಹಿತಿಗಾರನ್ನು, ತತ್ವಪದಕಾರರನ್ನು, ನೆನೆಯುವುದು ಮತ್ತು ಇಂತಹ ಜಯಂತಿಗಳನ್ನು ಆಚರಣೆ ಮಾಡುತ್ತ ಸಾಹಿತಿಗಳ ಬಗ್ಗೆ ತಿಳಿದುಕೊಳ್ಳುವುದು ನಮ್ಮ ಪುಣ್ಯ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್. ಪಿ ತಾರಾನಾಥ್ ಹಾಗೂ ಇತರರಿದ್ದರು.

## ಕಾರು ಡಿಕ್ಕಿ: ಯುವಕ ಸಾವು, ಮೂವರಿಗೆ ಗಾಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಪಟ್ಟಣದ ಸೂರನಹಳ್ಳಿ ಬಡಾವಣೆಯಲ್ಲಿ ಸೋಮವಾರ ರಾತ್ರಿ ಕಾರು ಡಿಕ್ಕಿಯಾಗಿ ಯುವಕ ಮೃತಪಟ್ಟು, ಮೂವರು ಗಾಯಗೊಂಡಿದ್ದಾರೆ.

ಕೃಷ್ಣ ಎಂಬುವವರ ಪುತ್ರ ಎಸ್. ಕೆ.ಮನು ಮೃತ (27) ದುರ್ದೈವಿ. ಸಹೋದರ ಸಂಬಂಧಿಕರಾದ ಅಭಿಷೇಕ್, ರಾಕೇಶ್ ಹಾಗೂ ಕುಶಾಲ್ ಎಂಬುವವರಿಗೆ ಗಾಯಗಳಾಗಿವೆ. ಕಾರು ಚಾಲಕ ಪರಾರಿಯಾಗಿದ್ದಾನೆ.

ಆದಿಚುಂಚನಗಿರಿ ಮಠಕ್ಕೆ ಹೋಗುವುದಕ್ಕಾಗಿ ಮೂವರು ಸಹೋದರರು ಚರ್ಚೆ ನಡೆಸುತ್ತಾ ಮನು ಮನೆ ಮುಂದೆ ನಿಂತಿದ್ದರು. ರಾತ್ರಿ 12ರ ಸಮಯದಲ್ಲಿ ಫಾರ್ಚೂನರ್ ಕಾರಿನಲ್ಲಿ ಜೋರಾಗಿ ಯುವಕ ಬಂದಿದ್ದು, ತನ್ನ ಪಕ್ಕದ ಬಾಗಿಲನ್ನೂ ತೆರೆದಿದ್ದ. ಅದನ್ನು ನೋಡಿದ ನಾಲ್ವರು, ನಿಧಾನಕ್ಕೆ ಹೋಗು, ಬಾಗಿಲು ಹಾಕಿಕೋ ಎಂದು ಜೋರಾಗಿ ಕೂಗಿದ್ದಾರೆ. ಅದರಿಂದ ಕೆರಳಿದ ಆತ ಸ್ವಲ್ಪ ದೂರ ಮುಂದೆ ಹೋಗಿದ್ದವನು ಹಿಂತಿರುಗಿ ಬಂದು ನಿಂತಿದ್ದರಿಗೆ ಗುದ್ದಿಸಿದ್ದಾನೆ. ಅಪಘಾತದಲ್ಲಿ ಮನು ಸ್ಥಳದಲ್ಲೇ ಮೃತಪಟ್ಟಿದ್ದಾನೆ. ವಿಷಯ ತಿಳಿಯುತ್ತಿದ್ದಂತೆ ಪಟ್ಟಣ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

## ಕಬ್ಬಳಿಯಲ್ಲಿ ಬಸವೇಶ್ವರಸ್ವಾಮಿ ವೈಭವದ ರಥೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಪುರಾಣ ಪ್ರಸಿದ್ಧ ಶ್ರೀ ಕ್ಷೇತ್ರ ಕಬ್ಬಳಿ ಬಸವೇಶ್ವರ ಸ್ವಾಮಿಯ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಮಹಾ ಶಿವರಾತ್ರಿ ಹಬ್ಬದ ನಂತರದ ಸೋಮವಾರ ಸಂಜೆ ಬಾಳೆಕಂಬ ತಂದು ದೇಗುಲದಲ್ಲಿ ಪ್ರತಿಷ್ಠಾಪಿಸಿ ರಂಗದ ಕುಣಿತದೊಂದಿಗೆ ಬಸವೇಶ್ವರ ಸ್ವಾಮಿಯ ಹಬ್ಬಕ್ಕೆ ಚಾಲನೆ ದೊರೆಯಿತು. 15 ದಿನಗಳ ಕಾಲ ಪ್ರತಿ ರಾತ್ರಿ ಸ್ವಾಮಿಗೆ ವಿಶೇಷ ಪೂಜೆ ಹಾಗೂ ರಂಗದ ಕುಣಿತ ಜರುಗಿದ್ದು ಪಾನಕ, ಪ್ರಸಾದ ವಿನಿಯೋಗ ನಡೆಯಿತು.

ಶನಿವಾರ ಬೆಳಿಗ್ಗೆ ಗ್ರಾಮದ 11 ದೇಗುಲಗಳಿಗೆ ಹಸಿರು ಚಪ್ಪರ ಹಾಕಲಾಗಿದ್ದು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ವಿದ್ಯುತ್ ದೀಪಲಂಕಾರ ಹಾಗೂ ಉತ್ಸವದ ಬೀದಿಯನ್ನು ಸ್ವಚ್ಛಗೊಳಿಸಿ ರಂಗೋಲಿ ಬಿಡಿಸಲಾಗಿತ್ತು.




ಶನಿವಾರ ಶ್ರೀ ಬಸವೇಶ್ವರ ಸ್ವಾಮಿಗೆ ಮಜ್ಜನ ಪೂಜೆ ನೆರವೇರಿದ್ದು ಭಾನುವಾರ ಬೆಳಗ್ಗೆ ಅಭಿಷೇಕ, ಕುಂಕುಮಾರ್ಚನೆ ಹಾಗೂ ಪುಷ್ಪಾರ್ಚನೆ ಬಳಿಕ ಒಡವೆ ವಸ್ತ್ರಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಸೋಮವಾರ ಬೆಳಿಗ್ಗೆಯಿಂದಲೇ ದೇಗುಲದಲ್ಲಿ ಪೂಜಾ ವಿಧಿ ವಿಧಾನಗಳು ಪ್ರಾರಂಭಗೊಂಡಿದ್ದು ಭಕ್ತರು ಹಣ್ಣು ಕಾಯಿ ಅರ್ಪಿಸಿ ಗಂಧ-ಕರ್ಪೂರ ಬೆಳಗಿಸಿದರು. ಶ್ರೀ ಸ್ವಾಮಿಯ ದರ್ಶನ ಪಡೆದು ಪುನೀತರಾದರು. ವಸ್ತ್ರ ಹಾಗೂ ವಿವಿಧ ಬಗೆಯ ಪುಷ್ಪಗಳಿಂದ ರಥವನ್ನು ಸಿಂಗರಿಸಲಾಯಿತು. ಸಂಜೆ 7 ಗಂಟೆಗೆ ಮಂಗಳವಾದ್ಯದೊಂದಿಗೆ ಶ್ರೀ ಬಸವೇಶ್ವರ ಸ್ವಾಮಿಯನ್ನು ಕರೆತಂದು ಅಲಂಕೃತ ರಥದ ಮೇಲೆ ಪ್ರತಿಷ್ಠಾಪಿಸಲಾಯಿತು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ರಥಕ್ಕೆ ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಪ್ರಮುಖರು ಬಾಳೆಕಂಬವನ್ನು ಕತ್ತರಿಸುತಿದ್ದಂತೆಯೇ ಭಕ್ತರು ಬಸವ ನಾಮ ಜಪಿಸುತ್ತ ರಥ ಎಳೆದರು. ಒಂದೆಡೆ ರಥ ನಿಲ್ಲಿಸಿದ ನಂತರ ಭಕ್ತರು ರಥದ ಕಲ್ಲಿನ ಚಕ್ರಗಳಿಗೆ ಈಡುಗಾಯಿ ಹಾಕುವ ಮೂಲಕ ಹರಕೆ ತೀರಿಸಿದರು. 3 ರಿಂದ 4 ಸಾವಿರ ತೆಂಗಿನ ಕಾಯಿಗಳನ್ನು ಈಡುಗಾಯಿ ಒಡೆದಿದ್ದು ವಿಶೇಷವಾಗಿತ್ತು.

ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಶಿವನಂಜೇಗೌಡ, ಎನ್.ಆರ್. ರತ್ನರಾಜ್, ಗುಡಿಗೌಡ ಪ್ರಕಾಶ್, ಪ್ರಧಾನ ಅರ್ಚಕ ರೇಣುಕಾರಾಧ್ಯ, ಅರ್ಚಕರ ತಂಡ ಹಾಗೂ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

## ಜಿಲ್ಲಾ ನ್ಯಾಯಾಲಯಕ್ಕೆ ಮತ್ತೆ ಬಂತು ಹುಸಿ ಬಾಂಬ್ ಬೆದರಿಕೆ



ಹಾಸನ: ನಗರದ ಜಿಲ್ಲಾ ನ್ಯಾಯಾಲಯದ ಅಧಿಕೃತ ಇಮೇಲ್ ಐಡಿಗೆ ಮತ್ತೆ ಹುಸಿ ಬಾಂಬ್ ಬೆದರಿಕೆ ಸಂದೇಶ ಬಂದಿರುವ ಘಟನೆ ಬೆಳಕಿಗೆ ಬಂದಿದೆ.

ಫೆ. 3ರ ಮಂಗಳವಾರ ಬೆಳಗಿನ ಜಾವ 5.40ಕ್ಕೆ ಇಮೇಲ್ ವಿಳಾಸಕ್ಕೆ **ameeza-hussain@hotmail.com** ಎಂಬ ಐಡಿಯಿಂದ ಸಂದೇಶ ಕಳುಹಿಸಲಾಗಿದ್ದು, ಬೆಳಿಗ್ಗೆ 11.50ಕ್ಕೆ ನ್ಯಾಯಾಧೀಶರ ಕೊಠಡಿಯಲ್ಲಿ ಸೈನೈಡ್ ವಿಷಾನಿಲ ತುಂಬಿದ ಆರ್‌ಡಿಎಕ್ಸ್ ಬಾಂಬ್ ಸ್ಫೋಟಗೊಳ್ಳುತ್ತದೆ. ಬೆಳಿಗ್ಗೆ 11 ಗಂಟೆಯೊಳಗೆ ನ್ಯಾಯಾಧೀಶರು ನಿರಪರಾಧಿ ನಾಗರಿಕನನ್ನು ಸ್ಥಳಾಂತರಿಸಬೇಕು ಎಂಬ ಬೆದರಿಕೆ ಬರಹಗಳಿದ್ದವು. ಜೊತೆಗೆ 26/11 ಮುಂಬೈ ಭಯೋತ್ಪಾದಕ ದಾಳಿ ಹಾಗೂ ಅಜ್ಮಲ್ ಕಸಬ್ ಪ್ರಕರಣದ ಉಲ್ಲೇಖಗಳನ್ನೂ ಮಾಡಲಾಗಿದೆ. ಘಟನೆಯ ಮಾಹಿತಿ ಸಿಕ್ಕ ತಕ್ಷಣ ಡಿವೈಎಸ್‌ಪಿ ಪಾಲಾಕ್ಷ ಅವರ ನೇತೃತ್ವದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಶ್ವಾನದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಹಾಯದಿಂದ ಕಟ್ಟಡವನ್ನು ಸಂಪೂರ್ಣವಾಗಿ ಪರಿಶೀಲಿಸಿದರು. ಸಮಗ್ರ ತಪಾಸಣೆ ನಡೆಸಿದರೂ ಯಾವುದೇ ಬಾಂಬ್ ಅಥವಾ ಅನುಮಾನಾಸ್ಪದ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಜಿಲ್ಲಾ ನ್ಯಾಯಾಲಯದ ಆಡಳಿತಾಧಿಕಾರಿ ಡಿ. ವಸಂತ ಅವರು ಹಾಸನ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. 2025ರ ಡಿ. 15 ರಂದು ಜಿಲ್ಲಾಧಿಕಾರಿ ಕಚೇರಿ, 2026ರ ಜ. 6 ಹಾಗೂ ಫೆ. 16.02.2026 ರಂದು ಜಿಲ್ಲಾ ನ್ಯಾಯಾಲಯದ ಇಮೇಲ್ ಐಡಿಗೆ ಸಹ ಹುಸಿ ಬಾಂಬ್ ಬೆದರಿಕೆ ಸಂದೇಶಗಳು ಬಂದಿದ್ದವು. ಆದರೆ ಎಲ್ಲ ಸಂದರ್ಭಗಳಲ್ಲೂ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿರಲಿಲ್ಲ.

# ಭೂ ಮಾಫಿಯಾ ತಡೆಗೆ ಎಸ್‌ಐಟಿಯಿಂದ ತನಿಖೆಯಾಗಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನಲ್ಲಿ ಭೂ ಮಾಫಿಯಾ ಮಿತಿ ಮೀರಿದ್ದು ಕಂದಾಯ ಸಚಿವರು ವಿಶೇಷ ತನಿಖಾ ತಂಡ ರಚಿಸಿ (ಎಸ್‌ಐಟಿ) ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಆಗ್ರಹಿಸಿದರು.



ತಾಲ್ಲೂಕು ಕಚೇರಿಗೆ ಭೇಟಿ ನೀಡಿ ವಿವಿಧ ಭೂ ಅಕ್ರಮಗಳ ಬಗ್ಗೆ ತರಾಟೆಗೆ ತೆಗೆದುಕೊಂಡ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಭೂ ಮಾಫಿಯಾದವರೊಂದಿಗೆ ಹಾಸನ ತಹಶೀಲ್ದಾರ್ ಸೇರಿ ಕಂದಾಯ ಇಲಾಖೆ ಅಧಿಕಾರಿಗಳು ಶಾಮೀಲಾಗಿದ್ದಾರೆ. ಕಟ್ಟಾಯ ಹೋಬಳಿ ಮಲ್ಲಪ್ಪನಳ್ಳಿಯಲ್ಲಿ ಬಂಡೆಗಳಿರುವ 11 ಎಕರೆ 9 ಗುಂಟೆ ಕರಾಬು ಭೂಮಿಯನ್ನು ಬಗರ್ ಹುಕುಂ ಸಾಗುವಳಿ ದಾಖಲೆ ಸೃಷ್ಟಿಸಿ ಮಂಜೂರು ಮಾಡಿ ಆನಂತರ ಅದೇ ಭೂಮಿಯನ್ನು ಮಾರಾಟ ಮಾಡಿ ಅಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಕಲ್ಲು ಗಣಿಗಾರಿಕೆ ನಡೆಸುತ್ತಿವೆ. ಈ ಗಣಿಗಾರಿಕೆ ತಹಶೀಲ್ದಾರ್ ಹಾಗ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ಕುಮ್ಮಕ್ಕಿನಿಂದಲೇ ನಡೆಯುತ್ತಿದೆ ಎಂದು ಆರೋಪಿಸಿದರು.

ತಾಲ್ಲೂಕಿನ ಚಿಕ್ಕಕೊಂಡಗೊಳ, ವಿಮಾನ ನಿಲ್ದಾಣದ ಬಳಿ ಹಾಗೂ ಐಐಟಿಗೆ ಸ್ವಾಧೀನಪಡಿಸಿಕೊಂಡಿರುವ ಭೂಮಿ ಸುತ್ತಮುತ್ತಲಿನ ಖರಾಬು ಭೂಮಿಯನ್ನು ಬಗರ್ ಹುಕುಂ ಸಾಗುವಳಿಯೆಂದು ಅಕ್ರಮವಾಗಿ ಮಂಜೂರು ಮಾಡಿಕೊಂಡು ಭೂ ಮಾಫಿಯಾಗಳು ಕಬಳಿಸುತ್ತಿವೆ. ಕಂದಾಯ ಸಚಿವರು ಪರಿಶೀಲನೆ ನಡೆಸಲಿ. ನಾನೇ ಸಚಿವರಿಗೆ ಪೂರ್ಣ ವಿವರ ಹಾಗೂ ದಾಖಲೆಗಳನ್ನು ನೀಡುವೆ. ಕಂದಾಯ ಸಚಿವರು ಪ್ರಾಮಾಣಿಕರು, ಶಿಸ್ತಿನವರು ಎಂದು ಹೇಳಲಾಗುತ್ತಿದೆ. ಅವರು ಈ ಬಗ್ಗೆ ವಿಶೇಷ ತನಿಖಾದಳದಿಂದ ತನಿಖೆ ನಡೆಸಲಿ. ಬಡ ರೈತರು ಬಗರ್ ಹುಕುಂ ಸಾಗುವಳಿ ಮಾಡಿದ್ದರೆ ಮಂಜೂರು ಮಾಡಿಕೊಡಲಿ. ಆದರೆ ಭೂ ಮಾಫಿಯಾದವರು ಕಬಳಿಸುವ ಹುನ್ನಾರವನ್ನು ತಡೆಯಬೇಕು. ಅಧಿಕಾರಿಗಳೇ ಸರ್ಕಾರಿ ಭೂಮಿ, ಖರಾಬು ಭೂಮಿಯನ್ನು ಭೂ ಮಾಫಿಯಾದವರಿಗೆ ಹುಡುಕಿಕೊಟ್ಟು ಅವರಿಂದ ಲಕ್ಷಾಂತರ ರೂ. ಪಡೆಯುವುದು ಇಲ್ಲವೇ ಬೇನಾಮಿ ಆಸ್ತಿ ಮಾಡಿಕೊಳ್ಳುತ್ತಿದ್ದಾರೆ ಎಂದು ರೇವಣ್ಣ ಆರೋಪಿಸಿದರು.

ದುದ್ದ ಹೋಬಳಿ ಕಿತ್ತನೆಕೆರೆ ಗ್ರಾಮದಲ್ಲಿ ಬಗರ್ ಹುಕುಂ ಸಾಗುವಳಿಯಲ್ಲಿ ಮಂಜೂರಾದ 4 ಎಕರೆ 36 ಗುಂಟೆ ಜಮೀನನ್ನು ವೃದ್ಧೆಗೆ ಪೌತಿ ಖಾತೆ ಮಾಡಿಕೊಡದೆ ಕಂದಾಯ ನಿರೀಕ್ಷಕರು ಹಾಗು ತಹಶೀಲ್ದಾರ್ ಭೂ ಮಾಫಿಯಾದವರೊಂದಿಗೆ ಕಬಳಿಸುವ ಹುನ್ನಾರ ನಡೆಸಿದ್ದಾರೆಂದು ರೇವಣ್ಣ ಆರೋಪಿಸಿದರು.

ಕಿತ್ತನಕೆರೆ ಗ್ರಾಮದ ರಾಮೇಗೌಡ ಎಂಬವರಿಗೆ ಬಹಳ ಹಿಂದೆಯೇ ಗೋಮಾಳ ಭೂಮಿ ಬಗರ್ ಹುಕುಂ ಸಾಗುವಳಿಯಲ್ಲಿ 4 ಎಕರೆ 36 ಗುಂಟೆ ಜಮೀನು ಮಂಜೂರಾಗಿತ್ತು. ರಾಮೇಗೌಡ ಅವರು 2008ರಲ್ಲಿ ನಿಧನರಾಗಿದ್ದು, ಅವರ ಪತ್ನಿ ದ್ಯಾವಮ್ಮ ಪೌತಿ ಖಾತೆಗೆ ಅರ್ಜಿ ಸಲ್ಲಿಸಿದರೆ ಖಾತೆ ಮಾಡಿಕೊಡದೆ ಉದ್ದೇಶಪೂರ್ವಕವಾಗಿ ಕಂದಾಯ ನಿರೀಕ್ಷಕರು ಬೇರೊಬ್ಬರಿಂದ ತಕರಾರು ಅರ್ಜಿ ಪಡೆದುಕೊಂಡು ಆ ಭೂಮಿಯನ್ನು ಕಬಳಿಸಲು ಹುನ್ನಾರ ನಡೆಸಿದ್ದಾರೆ. ಇನ್ನು 10 ದಿನಗಳೊಳಗೆ ದ್ಯಾವಮ್ಮ ಅವರಿಗೆ ಪೌತಿ ಖಾತೆ ಮಾಡಿಕೊಡದಿದ್ದರೆ ಎಲ್ಲಾ ಜೆಡಿಎಸ್ ಶಾಸಕ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಬಳಿ ಕಾರ್ಯಕರ್ತರ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

# ಒಳ ಮೀಸಲಾತಿ ಅನ್ವಯ ನೇಮಕಾತಿಗೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಸರ್ಕಾರ ಭರ್ತಿಗೆ ಮುಂದಾಗಿರುವ 56,342 ಖಾಲಿ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಶೇ.15 ಒಳ ಮೀಸಲಾತಿಯನ್ನು ಗ್ರೂಪ್ ಎ, ಬಿ, ಸಿ ವರ್ಗೀಕರಣದಂತೆ ಕಡ್ಡಾಯವಾಗಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಮಾದರ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಜಿಲ್ಲಾಧ್ಯಕ್ಷ ಟಿ.ಆರ್.ವಿಜಯಕುಮಾರ್ ಮಾತನಾಡಿ, ಒಳ ಮೀಸಲಾತಿ ಕುರಿತು ಸುಪ್ರೀಂ ಕೋರ್ಟ್ ನಿರ್ದೇಶನದ ಬಳಿಕ ರಾಜ್ಯ ಸರ್ಕಾರ ಕಾಯ್ದೆ ರೂಪಿಸಿದರೂ, ಇತ್ತೀಚಿನ ಸರ್ಕಾರದ ಆದೇಶಗಳಲ್ಲಿ ಹಳೆಯ ಮೀಸಲಾತಿ ಹಾಗೂ ರೋಸ್ಟರ್ ಪದ್ಧತಿ ಮುಂದುವರಿಸಿರುವುದು ಒಳ ಮೀಸಲಾತಿ ಆಶಯಕ್ಕೆ ಧಕ್ಕೆಯಾಗುತ್ತಿದೆ ಎಂದು ಆರೋಪಿಸಿದರು.



ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ವರದಿ ಆಧಾರದ ಮೇಲೆ ಪರಿಶಿಷ್ಟ ಜಾತಿಗಳನ್ನು ಉಪವರ್ಗೀಕರಿಸಿ ಶೇ.15 ಒಳ ಮೀಸಲಾತಿ ಸ್ಪಷ್ಟವಾಗಿ ಜಾರಿಗೊಳಿಸಬೇಕು. ಜೊತೆಗೆ ಶೇ.56 ಮೀಸಲಾತಿ ವ್ಯವಸ್ಥೆಯನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಒಳ ಮೀಸಲಾತಿ ಜಾರಿಗೊಳಿಸದಿದ್ದಲ್ಲಿ ರಾಜ್ಯಾದ್ಯಂತ ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಮಹಾಸಭಾದ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

# ಕೆಎಸ್‌ಆರ್‌ಟಿಸಿ ನೌಕರ ವೀರಣ್ಣ ಸಾವು: ತಪ್ಪಿತಸ್ಥರ ಬಂಧನಕ್ಕೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೆಎಸ್‌ಆರ್‌ಟಿಸಿ ನೌಕರ ಆರ್.ಡಿ.ವೀರಣ್ಣ ಅವರ ಹತ್ಯೆ ಪ್ರಕರಣವನ್ನು ತ್ವರಿತವಾಗಿ ತನಿಖೆ ನಡೆಸಿ, ಕೊಲೆಗಾರರನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಆಗ್ರಹಿಸಿ ಸಿಐಟಿಯು, ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿ, ದಲಿತ ಹಕ್ಕುಗಳ ಸಮಿತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದರು ಸೋಮವಾರ ಪ್ರತಿಭಟನೆ ನಡೆಯಿತು.




ಆಲೂರು ತಾಲ್ಲೂಕಿನ ರಾಜನಹಳ್ಳಿ ಗ್ರಾಮದ ಆರ್.ಡಿ.ವೀರಣ್ಣ (58) ಅವರನ್ನು ಜಮೀನಿನಲ್ಲೇ ಹತ್ಯೆಗೈದು ಬರ್ಬರವಾಗಿ ಪೆಟ್ರೋಲ್ ಹಾಕಿ ಸುಟ್ಟುಹಾಕಿರುವ ಪ್ರಕರಣ ಇಡೀ ಜಿಲ್ಲೆಯನ್ನೇ ಬೆಚ್ಚಿಬೀಳಿಸಿತ್ತು. ಇಂತಹ ಅತ್ಯಂತ ಅಮಾನುಷ ನಡೆದು 15 ದಿನಗಳು ಕಳೆಯುತ್ತಾ ಬಂದರೂ ಈ ಪ್ರಕರಣದ ತನಿಖೆ ನಿಧಾನಗತಿಯಲ್ಲಿದೆ. ಹತ್ಯೆಗೈದಿರುವವರ ಮೇಲೆ ಕಾನೂನು ಕ್ರಮ ಕೈಗೊಳ್ಳದಿರುವುದು ಪೊಲೀಸ್ ತನಿಖೆಯ ಮೇಲೆಯೇ ಅನುಮಾನಗಳನ್ನು ಮೂಡಿಸುತ್ತಿದೆ. ಜೊತೆಗೆ ಇದು ಕೃತ್ಯ ನಡೆಸಿದವರು ಕಾನೂನನ್ನೂ ಕಣ್ಮರೆಸಿ ತಪ್ಪಿಸಿಕೊಳ್ಳಲು ಅವಕಾಶ ನೀಡಿದಂತಾಗುತ್ತದೆ ಎಂದು ಆರೋಪಿಸಿದರು.

ಈ ಹತ್ಯೆ ಪ್ರಕರಣ ಮೇಲ್ನೋಟಕ್ಕೆ ಆಸ್ತಿ ವಿವಾದಕ್ಕೆ ದಾಯಾದಿಗಳು ಹತ್ಯೆ ಮಾಡಿರಬಹುದೆಂದು ಕಂಡರೂ ವೀರಣ್ಣ ಅವರನ್ನು ಈ ರೀತಿಯಾಗಿ ಅತ್ಯಂತ ಬರ್ಬರವಾಗಿ ಹತ್ಯೆ ಮಾಡಿರುವುದನ್ನು ನೋಡಿದರೆ ಇದೊಂದು ವ್ಯವಸ್ಥಿತ ಪಿತೂರಿ ರೂಪಿಸಿ ಸಂಚುಮಾಡಿ ಹತ್ಯೆ ಮಾಡಿರುವಂತಿದೆ. ವೀರಣ್ಣ ಹತ್ಯೆಯ ಹಿಂದೆ ಮೇಲ್ಜಾತಿಗೆ ಸೇರಿದ ಹಾಗೂ ಆರ್ಥಿಕ ಮತ್ತು ರಾಜಕೀಯ ಪ್ರಭಾವ ಹೊಂದಿರುವ ಕಾಣದ ಕೈಗಳು ಸೇರಿ ಅತ್ಯಂತ ವ್ಯವಸ್ಥಿಯವಾಗಿ ಸಂಚು ನಡೆಸಿ ಕೃತ್ಯ ನಡೆಸಿರಬಹುದೆಂಬಂತೆ ಅನುಮಾನವಿದೆ ಎಂದು ಹೇಳಿದರು.

ಪೊಲೀಸ್ ಇಲಾಖೆಯು ಸಮಗ್ರವಾಗಿ ಎಲ್ಲಾ ಆಯಾಮಗಳಲ್ಲೂ ಅತ್ಯಂತ ತ್ವರಿತಗತಿಯಲ್ಲಿ ತನಿಖೆ ನಡೆಸಬೇಕು. ಸರ್ಕಾರವು ಈ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೂ ಶಿಫಾರಸ್ಸು ಮಾಡುವ ಮೂಲಕ ಹತ್ಯೆಗೈದವರನ್ನು ಶಿಕ್ಷೆಗೆ ಗುರಿಪಡಿಸಬೇಕು. ವೀರಣ್ಣ ಅವರ ಕುಟುಂಬಕ್ಕೆ ನ್ಯಾಯ ದೊರಕಿಸಲು ತನಿಖೆಯನ್ನು ತೀವ್ರಗೊಳಿಸಿ ತಪ್ಪಿತಸ್ಥರನ್ನು ಕೂಡಲೇ ಬಂಧಿಸದಿದ್ದಲ್ಲಿ ತೀವ್ರ ಸ್ವರೂಪದ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಮಾದಿಗ ದಂಡೋರ ಮುಖಂಡ ಟಿ.ಆರ್ ವಿಜಯ್ ಕುಮಾರ್, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಎಂ.ಜಿ. ಪೃಥ್ವಿ, ರಾಜಶೇಖರ್ ಹುಲಿಕಲ್, ನಾರಾಯಣದಾಸ್, ಹೆಚ್ ಆರ್ ನವೀನ್ ಕುಮಾರ್, ಅಂಬುಗ ಮಲ್ಲೇಶ್ ಇದ್ದರು.

# ಕೆಪಿಎಸ್ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಸೋಮನಹಳ್ಳಿಯ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಆವಿಜ್ಞಾನದ ಕುತೂಹಲ ಹಾಗೂ ಚಂದದ ಪರಿಸರಟ ಶೀರ್ಷಿಕೆಯಡಿ ಆಚರಿಸಲಾಯಿತು. ಭಾರತ ಜ್ಞಾನ ವಿಜ್ಞಾನ ಸಮಿತಿಯ ಸಂಪನ್ಮೂಲ ವ್ಯಕ್ತಿ ನಿಟ್ಟೂರು ವೈದ್ಯಾಧಿಕಾರಿ ಡಾ. ಹೆಚ್.ಎ. ಮಂಜುನಾಥ್, ಸಿದ್ದೇಶ್ವರ ಕಾಲೇಜಿನ ಉಪನ್ಯಾಸಕ ಅಹಮದ್ ಹಗರೆ ಹಾಗೂ ಶಾಲೆಯ ಮುಖ್ಯ ಶಿಕ್ಷಕ ಎಲ್.ಎನ್. ಗಂಗಾಧರಪ್ಪ ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು.



ಲೇಖಕ ಅಹಮದ್ ಹಗರೆ ಮಾತನಾಡಿ, ರಾಷ್ಟ್ರೀಯ ವಿಜ್ಞಾನ ದಿನದ ಮೂಲ ಉದ್ದೇಶವೇ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ ಬೆಳೆಸುವುದಾಗಿದೆ. ಬ್ರಿಟಿಷರ ಆಳ್ವಿಕೆಯ ನಂತರ ಭಾರತವನ್ನು ಸ್ವಾವಲಂಬಿ ರಾಷ್ಟ್ರವಾಗಿ ರೂಪಿಸುವಲ್ಲಿ ವಿಜ್ಞಾನವೇ ಗಟ್ಟಿ ಆಧಾರವಾಗಿತ್ತು. ಸರ್ ಸಿ.ವಿ. ರಾಮನ್ ಅವರು ವಿಜ್ಞಾನಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದ್ದಾರೆ. ತಮ್ಮ ನೊಬೆಲ್ ಪ್ರಶಸ್ತಿಯನ್ನು ಭಾರತಕ್ಕೆ ಸಮರ್ಪಿಸಿ ದೇಶದಲ್ಲಿಯೇ ಉಳಿದು ವಿಜ್ಞಾನಾಭಿವೃದ್ಧಿಗೆ ಜೀವನವನ್ನೇ ಅರ್ಪಿಸಿದ ರಾಮನ್ ಅವರ ದೇಶಪ್ರೇಮವನ್ನು ಎಲ್ಲರೂ ಅರಿಯಬೇಕು. ಸತ್ಯೇಂದ್ರನಾಥ್ ಬೋಸ್, ವಿಕ್ರಂ ಸಾರಾಭಾಯಿ, ಎ.ಪಿ.ಜೆ. ಅಬ್ದುಲ್ ಕಲಾಂ, ಯು. ಆರ್. ರಾವ್ ಮೊದಲಾದ ವಿಜ್ಞಾನಿಗಳ ಸಾಧನೆಗಳನ್ನು ಪ್ರಸ್ತಾಪಿಸಿ ಭಾರತವನ್ನು ವಿಜ್ಞಾನ ಕ್ಷೇತ್ರದಲ್ಲಿ ಉನ್ನತ ಮಟ್ಟಕ್ಕೆ ತಲುಪಿಸುವಲ್ಲಿ ರಾಮನ್ ಅವರ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಗುರಿ ಹಾಗೂ ಸಾಧನೆಯ ಛಲ ಇದ್ದರೆ ವಿದ್ಯಾರ್ಥಿಗಳೂ ಭವಿಷ್ಯದಲ್ಲಿ ಮಹತ್ವದ ಆವಿಷ್ಕಾರಗಳನ್ನು ಮಾಡಬಹುದು ಎಂದು ಪ್ರೇರಣಾದಾಯಕ ಸಂದೇಶ ನೀಡಿದರು.

ಸಂಪನ್ಮೂಲ ವ್ಯಕ್ತಿ ಡಾ. ಹೆಚ್.ಜಿ. ಮಂಜುನಾಥ್ ಅವರು, ವಿಜ್ಞಾನ ಪರಿಸರಬದುಕಿನ ಪರಸ್ಪರ ಸಂಬಂಧದ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಪರಿಸರ ಮಾಲಿನ್ಯ, ಘನತ್ಯಾಜ್ಯ ನಿರ್ವಹಣೆ, ಕಸದಿಂದ ರಸ, ವಾಯು ಮತ್ತು ಜಲ ಮಾಲಿನ್ಯ, ಮರಗಿಡಗಳ ನಾಶ ಹಾಗೂ ಅವುಗಳಿಂದ ಉಂಟಾಗುತ್ತಿರುವ ಹೊಸ ಕಾಯಿಲೆಗಳ ಬಗ್ಗೆ ಪ್ರಾತ್ಯಕ್ಷಿಕೆಗಳ ಮೂಲಕ ವಿವರಿಸಿದರು. ಪರಿಸರ ವಿಜ್ಞಾನ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ಸಾಕಷ್ಟು ಮರಗಳ ಅಗತ್ಯವಿರುವುದನ್ನು ಲೆಕ್ಕಾಚಾರ ಮೂಲಕ ಮನದಟ್ಟು ಮಾಡಿಸಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ವರ್ಷಕ್ಕೆ ಕನಿಷ್ಠ 10 ಮರಗಳನ್ನು ನೆಟ್ಟು ಉಳಿಸುವ ಸಂಕಲ್ಪ ಕೈಗೊಳ್ಳುವಂತೆ ಪ್ರೇರೇಪಿಸಿದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ಎಲ್.ಎನ್.ಗಂಗಾಧರಪ್ಪ ಮಾತನಾಡಿ, ವಿಜ್ಞಾನ ಮನೋಭಾವವೇ ದೇಶದ ಪ್ರಗತಿಯ ದಾರಿ ಎಂದು ತಿಳಿಸಿದರು. ಶಿಕ್ಷಕಿ ಆಶಾ ವಂದನಾರ್ಪಣೆ ಸಲ್ಲಿಸಿದರು. ಶಿಕ್ಷಕಿ ನಳಿನ ನಿರೂಪಿಸಿದರು.

# ಕಾಳಿಕಾಂಬ ಮಠದಲ್ಲಿ ಇಂದಿನಿಂದ ಧಾರ್ಮಿಕ ಕಾರ್ಯಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶ್ರೀ ಕಾಳಿಕಾಂಬ ಕಮಠೇಶ್ವರ ದೇವಾಲಯದ ದ್ವಿತೀಯ ವರ್ಷದ ಪ್ರತಿಷ್ಠಾ ವರ್ಧಂತಿ ಮಹೋತ್ಸವ ಅಂಗವಾಗಿ ಪ್ರತಿಷ್ಠಾ ವರ್ಧಂತಿ ಮಹೋತ್ಸವ ಮತ್ತು ಧಾರ್ಮಿಕ ಕಾರ್ಯಕ್ರಮ, ಪರಮಪೂಜ್ಯ ಅನಂತ ಶ್ರೀ ವಿಭೂಷಿತ ಶಿವಸುಜ್ಞಾನತೀರ್ಥ ಸ್ವಾಮೀಜಿ ಮತ್ತು ಶ್ರೀ ಜ್ಞಾನಘನ ವಿದ್ಯಾತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮಾ. 4 ರಿಂದ 7ರ ವರೆಗೆ ನಡೆಯಲಿದೆ.

ಮಾ. 4 ರಂದು ಬೆಳಗ್ಗೆ ಪ್ರಸಾದ ವಾಸ್ತು ಹೋಮ, ಸುದರ್ಶನ ಹೋಮ, ಅಘೋರ ಹೋಮ, ನವಗ್ರಹ ಹೋಮ ನಂತರ ಸಂಜೆ ವೀಣಾ ವಾದನ ಕಾರ್ಯಕ್ರಮ ನಡೆಯಲಿದೆ. ಮಾ. 5 ರಂದು ರುದ್ರಹೋಮ ಮತ್ತು ಸಂಜೆ ದುರ್ಗಾದೀಪ ನಮಸ್ಕಾರ, ಪ್ರಾಕಾರೋತ್ಸವ ಮತ್ತು ಭಕ್ತಸುಧೆ ಹಮ್ಮಿಕೊಳ್ಳಲಾಗಿದೆ.

ಮಾ. 6 ರಂದು ನವ ಚಂಡಿಕಾಯಾಗ ಮತ್ತು ಸಂಜೆ ರಂಗಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮಾ. 7 ರಂದು ಬೆಳಗ್ಗೆ ವಿಶೇಷ ಅಭಿಷೇಕ ನಂತರ 9 ಗಂಟೆಯಿಂದ ನಗರದ ಪ್ರಮುಖ ಬೀದಿಗಳಲ್ಲಿ ಮಂಗಳವಾದ್ಯ, ಚಂಡೆ, ನಂದಿಧ್ವಜ, ವೀರಗಾಸೆ ಇತರೆ ಕಲಾ ತಂಡದೊಂದಿಗೆ ಶ್ರೀ ಕಾಳಿಕಾಂಬ ಕಮಠೇಶ್ವರ ಸ್ವಾಮಿಯವರ ದಿವ್ಯ ರಥೋತ್ಸವ ನಡೆಯಲಿದೆ.

ಸಂಜೆ ಉಯ್ಯಾಲೋತ್ಸವದ ನಂತರ ಧಾರ್ಮಿಕ ಮಹಾಸಭೆ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಎಚ್. ಬಿ. ಕುಮಾರಚಾರ್, ಪ್ರಧಾನ ಕಾರ್ಯದರ್ಶಿ ಎಚ್. ಎಸ್. ಆನಂದ್ ಮನವಿ ಮಾಡಿದ್ದಾರೆ.

# ಇಂದಿನಿಂದ ಕೋಡಿಮಠದಲ್ಲಿ ಮಹದೇಶ್ವರ ಜಾತ್ರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲ್ಲೂಕಿನ ಸುಕ್ಷೇತ್ರ ಹಾರನಹಳ್ಳಿ ಕೋಡಿಮಠದಲ್ಲಿ ಮಾ.4ರಿಂದ 6ರವರೆಗೆ ವೈಭವದಿಂದ ನಡೆಯಲಿರುವ ಶ್ರೀ ಮಹದೇಶ್ವರ ಜಾತ್ರಾ ಮಹೋತ್ಸವಕ್ಕೆ ಅಗತ್ಯ ಪೂರ್ವಸಿದ್ಧತೆ ಕೈಗೊಳ್ಳಲಾಗಿದೆ ಎಂದು ಪೀಠಾಧ್ಯಕ್ಷ ಶ್ರೀ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ತಿಳಿಸಿದರು.

ಸುಕ್ಷೇತ್ರ ಕೋಡಿಮಠದಲ್ಲಿ ಜಾತ್ರಾ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳಿಗೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ರಾಜ್ಯದ ವಿವಿಧ ಮಠಾಧೀಶರು, ಪ್ರವಚನಗಾರರು, ವಾಗ್ಮಿಗಳು, ಜನಪ್ರತಿನಿಧಿಗಳು ಮತ್ತು ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಮಾ. 4ರಂದು ಹುಣ್ಣಿಮೆ ಕಟ್ಟಲೆ, ಕೋಡಿಮಠ ಹಾಗು ಮಹದೇಶ್ವರ ಬೆಟ್ಟದಲ್ಲಿ ಷಟ್ ಸ್ಥಳ ಧ್ವಜಾರೋಹಣ, ಬೆಳ್ಳಿ ಸಿಂಹಾಸನ ಹಾಗು ರಜತ ಪಲ್ಲಕ್ಕಿ ಪೂಜೆ ಶಾಸ್ತ್ರೋಕ್ತವಾಗಿ ನಡೆಯಲಿದೆ. 1101 ಮುತ್ತೈದೆಗಳಿಗೆ ಉಡಿ ತುಂಬುವ ಸಂಪ್ರದಾಯಿಕ ಕಾರ್ಯಕ್ರಮವೂ ಜರುಗಲಿದೆ. ಬೆಳಿಗ್ಗೆ 11 ಗಂಟೆಗೆ ಧಾರ್ಮಿಕ ಸಭೆ ಆಯೋಜಿಸಲಾಗಿದೆ. ಮಾ.5ರಂದು ಶ್ರೀಮಠದಲ್ಲಿ ಹೆಚ್.ಎಸ್.ನೀಲಕಂಠಯ್ಯ, ಹೆಚ್. ಎಸ್. ಶಿವಲಿಂಗಮೂರ್ತಿ ಅವರಿಂದ ಪುರಾಣ ಶ್ರವಣ ನಡೆಯಲಿದೆ. ನಂತರ ಭಕ್ತರ ವಿನಂತಿಯ ಮೇರೆಗೆ ಹಾರನಹಳ್ಳಿ ಗ್ರಾಮದಲ್ಲಿ ಪಾದಪೂಜೆ ಸ್ವೀಕರಿಸಿ ಭಿಕ್ಷಾಟನೆ ನಡೆಯಲಿದೆ. ಸಂಜೆ 6 ಗಂಟೆಗೆ ಸೊರಬ



ಶ್ರೀಜಡೆ ಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮೀಜಿ ಸಾನ್ನಿಧ್ಯದಲ್ಲಿ ಧಾರ್ಮಿಕ ಸಮಾರಂಭ ಜರುಗಲಿದೆ.

ಮಾ.6ರಂದು ಮುಂಜಾನೆ ಶಿವಲಿಂಗಸ್ವಾಮಿಗಳ ಗದ್ದುಗೆಗೆ ರುದ್ರಾಭಿಷೇಕ ಹಾಗು ಸಹಸ್ರ ಬಿಲ್ವಾರ್ಚನೆ ನಡೆಯಲಿದೆ. ನಂತರ ಜಾನಪದ ಕಲಾತಂಡಗಳೊಂದಿಗೆ ಪಲ್ಲಕ್ಕಿ ಉತ್ಸವ ಹಾರನಹಳ್ಳಿ ಗ್ರಾಮಕ್ಕೆ ಪುರಪ್ರವೇಶ ಮಾಡಲಿದೆ. ಮಧ್ಯಾಹ್ನ ಮಹದೇಶ್ವರ ಬೆಟ್ಟದಲ್ಲಿ ಭಕ್ತರಿಂದ ಗುಗ್ಗಳ ಸೇವೆ, ಹೆಜ್ಜೆ ನಮಸ್ಕಾರ ಹಾಗೂ ದಿಂಡುರುಳು ಸೇವೆ ನೆರವೇರಲಿದೆ. ಸಂಜೆ ವಿವಿಧ ಮಠಾಧೀಶರ ಸಾನಿಧ್ಯದಲ್ಲಿ ಧಾರ್ಮಿಕ ಸಮಾರಂಭ ನಡೆಯಲಿದೆ. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸುವ ಸಾವಿರಾರು ಭಕ್ತರಿಗೆ ಅನ್ನದಾಸೋಹ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು. ಶ್ರೀಮಠದ ಉತ್ತರಾಧಿಕಾರಿ ಚೇತನ್ ಮರಿದೇವರು ಉಪಸ್ಥಿತರಿದ್ದರು.

# ಸದೃಢ ಆರೋಗ್ಯಕ್ಕೆ ದೇಹ ದಂಡನೆ ಅತ್ಯಗತ್ಯ: ಬಾಲಕೃಷ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಉದ್ಯಾನವನಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಿದಾಗ ಜನರು ಹೆಚ್ಚು ಆಕರ್ಷಿತರಾಗಿ ದೇಹವನ್ನು ದಂಡಿಸುವ ಮೂಲಕ ಆರೋಗ್ಯ ಸುಸ್ಥಿತಿಯಲ್ಲಿಟ್ಟುಕೊಳ್ಳಲು ಸಹಕಾರಿಯಾಗುತ್ತದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಪಟ್ಟಣ ಸಮೀಪದ ಹೇಮಾವತಿ ಉದ್ಯಾನವನ, ಹೌಸಿಂಗ್ ಬೋರ್ಡ್, ವೆಂಕಟೇಶ್ವರ ಲೇಔಟ್ ಮತ್ತು ಪುನೀತ್ ರಾಜಕುಮಾರ್ ಉದ್ಯಾನವನಗಳಲ್ಲಿ ಸಾರ್ವಜನಿಕರ ಪುರಸಭಾ ಎಂಟರ್ ಪ್ರೈಸಸ್ ಅನುದಾನದಡಿ 1.8 ಕೋಟಿ ರೂ. ವೆಚ್ಚದಲ್ಲಿ ಅಳವಡಿಸಲಾಗಿರುವ ಓಪನ್ ಜಿಮ್ ಉದ್ಘಾಟಿಸಿ ಮಾತನಾಡಿದರು.

ನಿತ್ಯ ಉದ್ಯಾನವನಗಳಲ್ಲಿ ವಾಕಿಂಗ್ ನಡೆಸುವ ಸಾರ್ವಜನಿಕರಿಂದ ಓಪನ್ ಜಿಮ್ ಅಳವಡಿಸುವಂತೆ ಮನವಿ ಬಂದ ಹಿನ್ನೆಲೆಯಲ್ಲಿ ಬೇಡಿಕೆಗೆ ಅನುಗುಣವಾಗಿ ಮೊದಲ ಹಂತದಲ್ಲಿ 6 ಉದ್ಯಾನವನಗಳಿಗೆ ಓಪನ್ ಜಿಮ್ ಅಳವಡಿಸಲಾಗಿದೆ. ಎರಡನೇ ಹಂತದಲ್ಲಿ ಹೇಮಾವತಿ ನಾಲೆಯ ಎಡಭಾಗದಲ್ಲಿರುವ ನಾಲ್ಕನೆ ಉದ್ಯಾನವನ್ನು ಮಕ್ಕಳಿಗಷ್ಟೆ ಸೀಮಿತಗೊಳಿಸಿ ಅವರಿಗೆ ಅಗತ್ಯವಿರುವ ಆಟಿಕೆ ಉಪಕರಣಗಳನ್ನು ಅಳವಡಿಸಲಾಗುವುದು ಎಂದರು.

ಇನ್ನೊಂದು ಉದ್ಯಾನವನದಲ್ಲಿ ಮಕ್ಕಳಿಗೆ ಸ್ಕೇಟಿಂಗ್ ತರಬೇತಿ ನಡೆಯುತ್ತಿದ್ದು, ಪೋಷಕರ ಮನವಿ ಮೇರೆಗೆ ಸ್ಕೇಟಿಂಗ್ ರ‍್ಯಾಕ್ ಮಾಡಿಕೊಡಲಾಗಿದೆ. ಹೇಮಾವತಿ ಇಲಾಖೆಯಡಿಯ ನಾಲ್ಕು ಉದ್ಯಾನವಗಳ ಪೈಕಿ ಪುರುಷರಿಗೊಂದು, ಮಹಿಳೆಯರಿಗೊಂದು ಮತ್ತು ಮಕ್ಕಳಿಗೊಂದು ಉದ್ಯಾನವನವನ್ನು ಮೀಸಲಿರಿಸಲಾಗಿದೆ.



ಈ ಪೈಕಿ ಎರಡು ಉದ್ಯಾನವನಗಳಲ್ಲಿ ಓಪನ್ ಜಿಮ್, ಮತ್ತೊಂದರಲ್ಲಿ ಮಕ್ಕಳಿಗೆ ಆಟಿಕೆ, ಮತ್ತೊಂದರಲ್ಲಿ ಸ್ಕೇಟಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ, ಇದರೊಂದಿಗೆ ಯೋಗಾಭ್ಯಾಸ ಮಾಡುವವರಿಗೆ ಯೋಗಾ ಮಂಟಪವನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಪಟ್ಟಣದ ಜನತೆ ಇವರೆಲ್ಲವುದರ ಬಳಕೆಯೊಂದಿಗೆ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು. ಇದೇ ವೇಳೆ ಉದ್ಯಾನವನಗಳಲ್ಲಿ ರಾತ್ರಿ ವೇಳೆಯಲ್ಲಿಯೂ ವಿಹಾರ ಮಾಡುವ ಕಾರಣ ಉತ್ತಮ ದೀಪದ ವ್ಯವಸ್ಥೆ ಮಾಡುವಂತೆ ಸಾರ್ವಜನಿಕರು ಮನವಿ ಮಾಡಿದ ಹಿನ್ನಲೆಯಲ್ಲಿ ಪುರಸಭೆಯಿಂದ ದೀಪದ ವ್ಯವಸ್ಥೆ ಮಾಡಲಾಗುವುದು. ಇವುಗಳ ನಿರ್ವಹಣೆಯನ್ನು ಹೇಮಾವತಿ ಇಲಾಖೆಗೆ ವಹಿಸಲಾಗುವುದು ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಮೋಹನ್‌ಕುಮಾರ್, ಕೆ.ಜೆ.ಸುರೇಶ್, ನವೀನ್, ಟಿಎಪಿಸಿಎಂಎಸ್ ನಿರ್ದೇಶಕರಾದ ಅನಿಲ್‌ಕುಮಾರ್, ಕುಂಬಾರಹಳ್ಳಿ ರಮೇಶ್, ಮುಖಂಡರಾದ ತಮ್ಮಯ್ಯ, ರಮೇಶ್, ರಾಮಕೃಷ್ಣ, ಪುಟ್ಟರಾಜು, ಪುರಸಭಾ ಮುಖ್ಯಾಧಿಕಾರಿ ಆರ್.ಯತೀಶ್‌ಕುಮಾರ್ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಮಾರ್ಚ್-04

**1789:** ಯುನೈಟೆಡ್ ಸ್ಟೇಟ್ಸ್ ಸಂವಿಧಾನ ಜಾರಿಗೆ ಬಂದು ಹೊಸ ಕೇಂದ್ರ ಸರ್ಕಾರ ಅಧಿಕೃತವಾಗಿ ಕಾರ್ಯಾರಂಭ ಮಾಡಿತು.

**1857:** ಭಾರತದ ಸ್ವಾತಂತ್ರ್ಯ ಹೋರಾಟದ ಕ್ರಾಂತಿಕಾರಿ ನಾಯಕ ವಿನಾಯಕ ದಾಮೋದರ ಸಾವರ್ಕರ್ ಜನಿಸಿದರು.

**1930:** ಭಾರತೀಯ ಸ್ವಾತಂತ್ರ್ಯ ಚಳವಳಿಯ ನಾಯಕರಲ್ಲಿ ಒಬ್ಬರಾದ ಮೌಲಾನಾ ಅಬುಲ್ ಕಲಾಂ ಆಜಾದ್ ಅವರನ್ನು ಬ್ರಿಟಿಷರು ಬಂಧಿಸಿದರು.

**1933:** ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಅವರುದೇಶದ 32ನೇ ಅಧ್ಯಕ್ಷರಾಗಿ ಪದಗ್ರಹಣ ಮಾಡಿದರು.

### ಜನನ

**1966:** ಅಮೆರಿಕದ ಖ್ಯಾತ ನಟಿ ರೆಬೆಕ್ಕಾ ರೊಮಿಜ್ನ್

**1857:** ವಿನಾಯಕ ದಾಮೋದರ ಸಾವರ್ಕರ್

### ನಿಧನ

**1906:** ಭಾರತದ ಪ್ರಸಿದ್ಧ ಸಮಾಜ ಸುಧಾರಕ ಗೋಪಾಲ ಕೃಷ್ಣ ಗೋಖಲೆ


# ಯುದ್ಧ ಪೀಡಿತ ಸ್ಥಳದಲ್ಲಿರುವ ಜಿಲ್ಲೆಯ 19 ಜನರು ಸುರಕ್ಷಿತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಮೇರಿಕ-ಇಸ್ರೇಲ್ ಹಾಗು ಇರಾನ್ ನಡುವೆ ನಡೆಯುತ್ತಿರುವ ಅನಿರೀಕ್ಷಿತ ಯುದ್ಧದಿಂದ ಜಿಲ್ಲೆಯ 19 ಜನರು ಸಿಲುಕಿದ್ದು, ಎಲ್ಲರೂ ಸುರಕ್ಷಿತ ಹಾಗೂ ಆರೋಗ್ಯವಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಹೇಳಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ಅಬುದಾಬಿಯಲ್ಲಿ 1, ಬಹರೇನ್‌ನಲ್ಲಿ 10, ದುಬೈನಲ್ಲಿ 7 ಹಾಗು ಕುವೈತ್‌ನಲ್ಲಿ ಒಬ್ಬರು ಸಿಲುಕಿದ್ದಾರೆ. ಎಲ್ಲರೊಂದಿಗೆ ಜಿಲ್ಲಾಡಳಿತ ಸಂಪರ್ಕದಲ್ಲಿದ್ದು ಅವರನ್ನು ಕರೆತರಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ. ಜಿಲ್ಲಾಡಳಿತ ತುರ್ತು ನೆರವು ಕಾರ್ಯಾಚರಣೆ ಕೇಂದ್ರಗಳನ್ನು ಸಕ್ರಿಯಗೊಳಿಸಿದೆ. ಜಿಲ್ಲೆಯವರ ಮಾಹಿತಿಯನ್ನು ರಾಜ್ಯ, ಕೇಂದ್ರ ಕಚೇರಿಗೆ ಸಲ್ಲಿಸಲಾಗಿದೆಯೆಂದು ಹೇಳಿದರು. ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿರುವ ಜಿಲ್ಲೆಯವರು ಇದುವರೆಗೂ ಯಾವುದೇ ಸಮಸ್ಯೆ ಇಲ್ಲ ಎಂದು ತಿಳಿಸಿದ್ದಾರೆ. ನಾನು ಕೆಲವರೊಂದಿಗೆ ಮಾತನಾಡಿದ್ದೇನೆ. ಅವರು ಸುರಕ್ಷಿತವಾಗಿರುವುದನ್ನು ಖಚಿತಪಡಿಸಿದ್ದಾರೆ ಎಂದರು. ಯುದ್ಧ ಪೀಡಿತ ಪ್ರದೇಶದಲ್ಲಿರುವವರ ಬಗ್ಗೆ ಕುಟುಂಬಸ್ಥರು ಆತಂಕ ಪಡುವ ಅಗತ್ಯವಿಲ್ಲ. ವಿಶೇಷವಾಗಿ ತಹಶೀಲ್ದಾರ್ ಹಾಗೂ ಹಿರಿಯ ಅಧಿಕಾರಿಗಳು ಅವರೊಂದಿಗೆ ನೇರ ಸಂಪರ್ಕದಲ್ಲಿದ್ದಾರೆ. ಯಾವುದೇ ತೊಂದರೆ ಹಾಗು ವಿಶೇಷ ನೆರವು ಅಗತ್ಯವಿದೆಯೇ ಎಂಬುದನ್ನು ವಿಚಾರಿಸಿದ್ದು ಇದುವರೆಗೂ ಯಾವುದೇ ಗಂಭೀರ ಸಮಸ್ಯೆ ಉದ್ಭವಿಸಿಲ್ಲ ಎಂದರು.

# ಚಿತ್ರಕಲಾ ಸ್ಪರ್ಧೆ: ಮೊಮಲ್ ಆಲಿ ಪ್ರಥಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಪಟ್ಟಣದ ಮಲ್ನಾಡ್ ಶಾಲೆಯ ನಾಲ್ಕನೇ ತರಗತಿ ವಿದ್ಯಾರ್ಥಿನಿ ಮೊಮಲ್ ಆಲಿ ಸಕಲೇಶಪುರದಲ್ಲಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ.

ಸಕಲೇಶಪುರ ಪಟ್ಟಣದ ಕುಶಾಲನಗರದಲ್ಲಿರುವ ಅಂಬೇಡ್ಕರ್ ಸಮುದಾಯ ಭವನದಲ್ಲಿ ಇಮೇಜಿನ್ ಚಿತ್ರಕಲಾ ಶಾಲೆವತಿಯಿಂದ ಎಲ್.ಕೆ.ಜಿ ರಿಂದ ಪಿ.ಯು.ಸಿ ವರೆಗಿನ ವಿದ್ಯಾರ್ಥಿಗಳಿಗಾಗಿ 2026-27ನೇ ಸಾಲಿನ ಚಿಣ್ಣರ ಚಿತ್ತಾರ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡಿದ್ದಾಳೆ.

ಈ ಸ್ಪರ್ಧೆಯಲ್ಲಿ ರಾಜ್ಯದ ಮಂಗಳೂರು, ಬೀದರ್, ಮೈಸೂರು ಸೇರಿ ವಿವಿಧ ಜಿಲ್ಲೆಗಳಿಂದ ಸುಮಾರು 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. 3 ಮತ್ತು 4ನೇ ತರಗತಿ ವಿಭಾಗದಲ್ಲಿ ಒಟ್ಟು 40 ವಿದ್ಯಾರ್ಥಿಗಳು ಸ್ಪರ್ಧಿಸಿದ್ದರು. ಅವರಲ್ಲಿ ಅರೆಹಳ್ಳಿ ಪಟ್ಟಣದ ಮಲ್ನಾಡ್ ಶಾಲೆಯ ವಿದ್ಯಾರ್ಥಿನಿ ಮೊಮಲ್ ಆಲಿ ಅವರು ಪರಿಸರ ಸಂರಕ್ಷಣೆ ವಿಷಯದ ಕುರಿತು ಚಿತ್ರ ಬಿಡಿಸುವ ಮೂಲಕ ಪ್ರಥಮ ಸ್ಥಾನ ಗಳಿಸಿದ್ದಾರೆ. ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಪ್ರಶಸ್ತಿ ವಿತರಿಸಿದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚಂಚಲಾ ಕುಮಾರಸ್ವಾಮಿ ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248